# ಸೀಮಾ-ಗಿರಿಧರ ಮದುವೆ

ಅಮ್ಮನನ್ನು ಊರಿಗೆ ತಲುಪಿಸಿ ಮತ್ತೆ ಬೆಂಗಳೂರಿಗೆ ವಾಪಾಸು ಬಂದು ಕಾರ್ಖಾನೆಯ ಕೆಲಸಕ್ಕೆ ಹೋಗತೊಡಗಿದೆ. ಕಿವಿಗಳಲ್ಲಿ ಸೀಮಾಳ ತಮಾಷೆಯ ಮಾತುಗಳೇ ಗುನುಗುಟ್ಟುತ್ತಿದ್ದವು. ಮನಸ್ಸಿನಲ್ಲಿ ಅವಳ ಸೌಮ್ಯವಾದ ನಗುಮುಖ, ಹಾವಭಾವಗಳ ಪ್ರತಿಬಿಂಬಗಳು ಆಗಾಗ ನೆನಪಾಗತೊಡಗಿದವು. ನಾನು ಅವಳು ಫೋನು ಮಾಡಬಹುದು ಎಂಬ ನಿರೀಕ್ಷೆಯಲ್ಲಿದ್ದೆ. ಆದರೆ ಒಂದು ವಾರವಾದರೂ ಅವಳಿಂದ ಕಾಲ್

